ಸಂಯೋಜನೆ ಹೊಂದದ ವೃತ್ತಿ / ಘಟಕಗಳನ್ನು ನಡೆಸುತ್ತಿರುವುದಾಗಿ ಇ-ಮೇಲ್, ದೂರು, ದೂರವಾಣಿ ಕರೆ ಅಥವಾ ಇನ್ನಾವುದಾದರೂ ಮೂಲಗಳಿಂದ ದೂರು ಸ್ವೀಕೃತವಾದಲ್ಲಿ ಅಂತಹ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ತಾಲ್ಲೂಕು ಆಡಳಿತದ ಸಹಾಯ ಪಡೆದು ಖುದ್ದು ಸ್ಥಳ ಪರಿಶೀಲನೆ ನಡೆಸಿ, ಆ ಸ್ಥಳದಲ್ಲಿ ಸಂಸ್ಥೆಯು ಸಂಯೋಜನೆ ಹೊಂದದಿರುವುದು ಅಥವಾ ಕೆಲವು ವೃತ್ತಿ / ಘಟಕಗಳಿಗೆ ಸಂಯೋಜನೆ ಪಡೆದು ಇನ್ನೂ ಕೆಲವು ವೃತ್ತಿ / ಘಟಕಗಳಿಗೆ ಸಂಯೋಜನೆ ಹೊಂದದೇ ಪ್ರವೇಶಾತಿ ಮಾಡಿಕೊಳ್ಳುತ್ತಿರುವುದು ಕಂಡುಬಂದಲ್ಲಿ ಆಡಳಿತ ಮಂಡಳಿಯ ಪದಾಧಿಕಾರಿ / ಪ್ರಾಂಶುಪಾಲರ ವಿರುದ್ಧ ಕೂಡಲೇ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ ದಾಖಲಿಸಲು ಸಂಬಂಧಿಸಿದ ವಿಭಾಗೀಯ ಜಂಟಿ ನಿರ್ದೇಶಕರು ಕ್ರಮಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

**PR-320**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಲ್ಲಿ ವಿಶೇಷ ನಿಯಮಾವಳಿಗಳ ಅನುಸಾರ ಸೇವಾ ಸಕ್ರಮಾತಿಗೊಂಡ ಕಿರಿಯ ತರಬೇತಿ ಅಧಿಕಾರಿಗಳ ಸೇವಾ ಸಕ್ರಮಾತಿಗೂ ಪೂರ್ವದಲ್ಲಿ ಸಲ್ಲಿಸಿದ ಗುತ್ತಿಗೆ ಆಧಾರದ ಸೇವಾ ಅವಧಿಯನ್ನು 10 ವರ್ಷಗಳ ಕಾಲಬದ್ಧ ಮುಂಬಡ್ತಿ ಮತ್ತು ಹಿರಿಯ ವೇತನ ಶ್ರೇಣಿಯ ಸ್ವಯಂಚಾಲಿತ ಮುಂಬಡ್ತಿಗೆ ಪರಿಗಣಿಸದಿರುವ ಬಗ್ಗೆ.

**ಓದಲಾಗಿದೆ:**

1. ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವಾಲಯದ ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಎಲ್ 101 ಇಟಿಐ 89 ದಿನಾಂಕ: 15/02/1996.
2. ಕಾರ್ಮಿಕ ಸಚಿವಾಲಯದ ಅಧಿಸೂಚನೆ ಸಂಖ್ಯೆ: ಎಲ್‌ಡಿ 102 ಇಟಿಐ 2000 ದಿನಾಂಕ: 19/7/2004.
3. ಅಧಿಸೂಚನೆ-I ಸಂಖ್ಯೆ: ಕಾಇ 201 ಇಟಿಐ 2011 ದಿನಾಂಕ: 20/12/2012.
4. ಅಧಿಸೂಚನೆ-II ಸಂಖ್ಯೆ: ಕಾಇ 201 ಇಟಿಐ 2011 ದಿನಾಂಕ: 20/12/2012.
5. ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ: 878-948/2013 ಮತ್ತು 949-1008/2013 ದಿನಾಂಕ: 26/02/2018ರಂದು ಹೊರಡಿಸಿದ ಆದೇಶ.
6. ಸರ್ಕಾರದ ಪತ್ರ ಸಂಖ್ಯೆ: ಕೌಉಜೀಇ 53 ಕೈತಸೇ 2019 ದಿನಾಂಕ: 17/6/2020.
7. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಇವರ ಸುತ್ತೋಲೆ ಸಂಖ್ಯೆ: ಕೈತಉ/ತರಬೇತಿ/ಆಡಳಿತ-1/ವಿವ-11/2018-19 ದಿನಾಂಕ: 10/9/2020.
8. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಇವರ ಆದೇಶ ಸಂಖ್ಯೆ: ಕೈತಉ/ತರಬೇತಿ/ಆಡಳಿತ-1/ವಿವ-11/2018-19 ದಿನಾಂಕ: 1/2/2021.
9. ಉಪ ಮಹಾಲೇಖಪಾಲರು (ಪಿಂಚಣಿ), ಮಹಾಲೇಖಪಾಲರ ಕಚೇರಿ ಇವರ ಪತ್ರ ಸಂಖ್ಯೆ: PM/GENL/2021-22/381 ದಿನಾಂಕ: 3/9/2021.
10. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಇವರ ಆದೇಶ ಸಂಖ್ಯೆ: ಕೈತಉ/ತರಬೇತಿ/ಆಡಳಿತ-1/ವಿವ-11/2018-19 ದಿನಾಂಕ: 30/9/2021.
11. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಇವರ ಪತ್ರ ಸಂಖ್ಯೆ: ಕೈತಉ/ತರಬೇತಿ/ಆಡಳಿತ-1/ವಿವ-11/2018-19 ದಿನಾಂಕ: 30/9/2021.

12. ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಇಡಿ 409 ಡಿಜಿಡಿ 2013 ದಿನಾಂಕ: 8/6/2016.
13. ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಇಡಿ 409 ಡಿಜಿಡಿ 2013 (ಭಾಗ-2) ದಿನಾಂಕ: 7/12/2017.

**ಪ್ರಸ್ತಾವನೆ:**

ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ "Karnataka Civil Services (Absorption of person appointed on Contract basis in the category of posts of Craft instructors / Junior Instructors (Redesignated as Junior Training Officers) in the department of Employment and Training (Training Wing) into state civil services (Special) Rules 1996î (ಸಂಕ್ಷಿಪ್ತವಾಗಿ ì1996ರ ವಿಶೇಷ ನಿಯಮಾವಳಿಗಳುî) ವಿಶೇಷ ನಿಯಮಾವಳಿಯನ್ನು ಪ್ರಕಟಿಸಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 75 ಅಭ್ಯರ್ಥಿಗಳನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಕಿರಿಯ ತರಬೇತಿ ಅಧಿಕಾರಿ ಹುದ್ದೆಗಳಿಗೆ ವಿಲೀನಗೊಳಿಸಲಾಗಿತ್ತು. ಸದರಿ ನಿಯಮಾವಳಿಗಳ ನಿಯಮ 4ರನ್ವಯ ಇಲಾಖೆಯಲ್ಲಿ ಸರ್ಕಾರಿ ಸೇವೆಗೆ ವಿಲೀನಗೊಂಡ ನೌಕರರ ವೇತನ ನಿಗದಿ, ಜೇಷ್ಠತೆ, ರಜೆ, ಪಿಂಚಣಿ, ಕಾಲಬದ್ಧ ಮುಂಬಡ್ತಿ ಮತ್ತು ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ಮುಂಬಡ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ.

***4. Pay fixation, Seniority, Leave and Pension of Junior Training Officers absorbed under these rules.-***

*(1) The initial basic pay of a Contract Junior Training Officer absorbed under these rules shall be fixed in the scale of pay of the Junior Training Officer to which he is appointed, at a stage equal to the basic pay that he would have been eligible to draw had he been appointed to such post as a regular candidate in accordance with the Karnataka Employment and Training Services (Craftsman and Apprenticeship Recruitment) Rules, 1985 with effect from the date of his appointment as Craft Instructor /Junior Instructor on contract basis.*

*2) The services rendered as a Craft Instructor/Junior Instructor (now re-designated as Junior Training Officer) shall count for the purpose of leave, increment and pension only and services rendered on contract basis shall not count for purpose of Seniority and grant of Selection Time Scale of pay under the Karnataka Civil Services (T.B.A) Rules 1983 and Karnataka Civil Service (Automatic grant of Special promotion to Senior Scale of pay) Rules 1991.*

1996ರ ವಿಶೇಷ ನಿಯಮಾವಳಿಗಳ ನಿಯಮ 4(2)ರನ್ವಯ ಗುತ್ತಿಗೆ ಆಧಾರದ ಸೇವಾವಧಿಯನ್ನು ರಜೆ, ಮುಂಬಡ್ತಿ ಹಾಗೂ ಪಿಂಚಣಿ ಉದ್ದೇಶಕ್ಕೆ ಮಾತ್ರ ಪರಿಗಣಿಸುವಂತೆ ಹಾಗೂ ಗುತ್ತಿಗೆ ಆಧಾರದ ಸೇವಾವಧಿಯನ್ನು Karnataka Civil Services (TBA) Rules 1983 and Karnataka Civil Services (Automatic grant of special promotion to senior scale of pay) Rules 1991 ರಡಿ ಆಯ್ಕೆಕಾಲಿಕ ವೇತನ ಶ್ರೇಣಿಗೆ ಪರಿಗಣಿಸತಕ್ಕದ್ದಲ್ಲವೆಂದು ನಿರ್ದೇಶಿಸಲಾಗಿದೆ.

ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ಅಧಿಸೂಚನೆಯಲ್ಲಿ "Karnataka Civil Services (Absorption of persons appointed on Contract basis in the category of posts of Craft instructors / Junior Instructors (Re-designated as Junior Training Officers) in the department of Employment and Training (Training Wing) (Special) Rules 2002" (ಸಂಕ್ಷಿಪ್ತವಾಗಿ '2002ರ ವಿಶೇಷ ನಿಯಮಾವಳಿಗಳು') ನಿಯಮಾವಳಿಗಳನ್ನು ಪ್ರಕಟಿಸಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ 85 ಅಭ್ಯರ್ಥಿಗಳನ್ನು ಇಲಾಖೆಯ ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಗೆ ವಿಲೀನಗೊಳಿಸಲಾಗಿತ್ತು. ಸದರಿ ನಿಯಮಾವಳಿಗಳ ನಿಯಮ 4ರನ್ವಯ ಇಲಾಖೆಯಲ್ಲಿ ಸರ್ಕಾರಿ ಸೇವೆಗೆ ವಿಲೀನಗೊಂಡ ನೌಕರರ ವೇತನ ನಿಗದಿ, ಜೇಷ್ಠತೆ, ರಜೆ, ಪಿಂಚಣಿ, ಕಾಲಬದ್ಧ ಮುಂಬಡ್ತಿ ಮತ್ತು ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ಮುಂಬಡ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ.

> ***4. Pay, pension, leave and Seniority of Junior Training Officers absorbed under these rules.-*** Notwithstanding anything contained in the Karnataka Civil Services Rules:-
> *(i) The intial basic pay of a Contract Junior Training Officer absorbed under these rules shall be fixed in the scale of pay of the Junior Training Officer to which he is appointed, at a stage equal to the basic pay that he would have been eligible to draw had he been appointed to such post as a regular candidate in accordance with the Karnataka Employment and Training Services (Craftsman and Apprenticeship Recruitment) Rules, 1985 with effect from the date of his appointment as Craft Instructor /Junior Instructor on contract basis.*
>
> *(ii) The services rendered as a Craft Instructor/Junior Instructor (now re-designated as Junior Training Officer) shall count for the purpose of leave, increment and pension only and services rendered on contract basis shall not count for purpose of Seniority and grant of Selection Time Scale of pay under the Karnataka Civil Services (T.B.A) Rules 1983 and Karnataka Civil Service (Automatic grant of Special promotion to Senior Scale of pay) Rules 1991.*

2002ರ ವಿಶೇಷ ನಿಯಮಾವಳಿಗಳ ನಿಯಮ 4(2)ರನ್ವಯ ಗುತ್ತಿಗೆ ಆಧಾರದ ಸೇವಾವಧಿಯನ್ನು ರಜೆ, ಮುಂಬಡ್ತಿ ಹಾಗೂ ಪಿಂಚಣಿ ಉದ್ದೇಶಕ್ಕೆ ಮಾತ್ರ ಪರಿಗಣಿಸುವಂತೆ ಹಾಗೂ ಗುತ್ತಿಗೆ ಆಧಾರದ ಸೇವಾವಧಿಯನ್ನು Karnataka Civil Services (TBA) Rules 1983 and Karnataka Civil Services (Automatic grant of special promotion to senior scale of pay) Rules 1991 ರಡಿ ಆಯ್ಕೆಕಾಲಿಕ ವೇತನ ಶ್ರೇಣಿಗೆ ಪರಿಗಣಿಸತಕ್ಕದ್ದಲ್ಲವೆಂದು ನಿರ್ದೇಶಿಸಲಾಗಿದೆ.

1996ರ ವಿಶೇಷ ನಿಯಮಾವಳಿಗಳಲ್ಲಿ 75 ಗುತ್ತಿಗೆ ಕಿರಿಯ ತರಬೇತಿ ಅಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸಲು ಆರ್ಥಿಕ ಇಲಾಖೆಯು ಒಪ್ಪಿಗೆ ಸೂಚಿಸಿರಲಿಲ್ಲ. ಆದಾಗ್ಯೂ ಆಡಳಿತ ಇಲಾಖೆಯು ಸಚಿವ ಸಂಪುಟದ ಅನುಮೋದನೆ ಪಡೆದು ಗುತ್ತಿಗೆ ಕಿರಿಯ ತರಬೇತಿ ಅಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸಲು ವಿಶೇಷ ನಿಯಮಾವಳಿಗಳನ್ನು ರೂಪಿಸಿ

ಪ್ರಕಟಿಸಿತ್ತು. 85 ಮಂದಿ ಗುತ್ತಿಗೆ ಕಿರಿಯ ತರಬೇತಿ ಅಧಿಕಾರಿಗಳನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲು ಆಡಳಿತ ಇಲಾಖೆಯು ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿದಾಗ 1996ರ ವಿಶೇಷ ನಿಯಮಗಳಲ್ಲಿ ವೇತನ ರಕ್ಷಣೆ, ರಜೆ, ನಿವೃತ್ತಿ ವೇತನ ಸೌಲಭ್ಯಗಳಿಗೆ ಗುತ್ತಿಗೆ ಆಧಾರದ ಸೇವೆಯನ್ನು ಪರಿಗಣಿಸಿರುವುದು ಸರ್ಕಾರದ ನೀತಿಗೆ ವಿರುದ್ಧವಾಗಿದೆ ಎಂದು, ಅದನ್ನು ಪರಿಷ್ಕರಿಸುವಂತೆ ಆರ್ಥಿಕ ಇಲಾಖೆಯು ಸೂಚಿಸಿತ್ತು. ಅದನ್ನು ಕಡೆಗಣಿಸಿ ಆಡಳಿತ ಇಲಾಖೆಯು 2002ರ ವಿಶೇಷ ನಿಯಮಾವಳಿಗಳಲ್ಲಿ 85 ಗುತ್ತಿಗೆ ಕಿರಿಯ ತರಬೇತಿ ಅಧಿಕಾರಿಗಳನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಿ ವಿಶೇಷ ನಿಯಮಾವಳಿಗಳನ್ನು ಪ್ರಕಟಿಸಿತ್ತು.

ಈ ನ್ಯೂನ್ಯತೆಯನ್ನು ಸರಿಪಡಿಸುವಂತೆ ಆರ್ಥಿಕ ಇಲಾಖೆ ಹಲವು ಬಾರಿ ಆಡಳಿತ ಇಲಾಖೆಗೆ ಹಲವು ಬಾರಿ ಸೂಚಿಸಿತ್ತು. ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಾಜ್ಯ ಸರ್ಕಾರ ಮತ್ತು ಜಿ.ಹಾಲಪ್ಪ ಹಾಗೂ ಇತರರು ಪ್ರಕರಣದಲ್ಲಿ ಈ ಕೆಳಕಂಡಂತೆ ತೀರ್ಪು ನೀಡಿರುವುದನ್ನು ಆಡಳಿತ ಇಲಾಖೆಯ ಗಮನಕ್ಕೆ ತಂದಿತ್ತು.

> *Such a situation in the present case will not arise at all. Because it is not the continuation of original appointment made which is one contract basis and contract come to an end either on the expiry of the term or on a regular candidate reporting to duty particularly in the contract itself makes it clear that the service shall not be counted for any purpose, the claim of the respondents could not have been brought under rule 41A at all.*

ಅದಲ್ಲದೆ, ಲೋಕೋಪಯೋಗಿ ಇಲಾಖೆಯು ಆರ್ಥಿಕ ಇಲಾಖೆಯ ಸೂಚನೆ ಮೇರೆಗೆ ತನ್ನ 2006ರ ವಿಶೇಷ ನಿಯಮಾವಳಿಗಳಿಗೆ ತಿದ್ದುಪಡಿ ತಂದು ಗುತ್ತಿಗೆ ಆಧಾರದ ಸೇವೆಯನ್ನು ಪರಿಗಣಿಸಿ ರಜೆ, ನಿವೃತ್ತಿ ವೇತನ ಇತ್ಯಾದಿಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವ ಉಪಬಂಧಗಳನ್ನು ತೆಗೆದುಹಾಕಿದೆ. 1990ರ ನಂತರ ಹಲವಾರು ಇಲಾಖೆಗಳು, ವಿಶ್ವವಿದ್ಯಾನಿಲಯಗಳು ಗುತ್ತಿಗೆ ಆಧಾರದ ನೇಮಕಾತಿಗಳನ್ನು ಸಕ್ರಮಗೊಳಿಸಿ ವಿಶೇಷ ನಿಯಮಗಳನ್ನು ರಚಿಸಿದ್ದು, ಇಂತಹ ವಿಶೇಷ ನಿಯಮಗಳಲ್ಲಿ ಗುತ್ತಿಗೆ ಆಧಾರದ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳನ್ನು ಅರ್ಹತಾದಾಯಕ ಸೇವೆ ಎಂದು ಪರಿಗಣಿಸಿರುವುದಿಲ್ಲ. ಕಾರ್ಮಿಕ ಇಲಾಖೆಯು ರಚಿಸಿರುವ ನಿಯಮಗಳಲ್ಲಿ ಈ ಸೌಲಭ್ಯಗಳನ್ನು ವಿಸ್ತರಿಸಿರುವುದು ತಾರತಮ್ಯಕ್ಕೆ ಎಡೆ ಮಾಡಿಕೊಟ್ಟಿದೆ ಮತ್ತು ಸರ್ಕಾರದ ನೀತಿಗೆ ವಿರುದ್ಧವಾಗಿದೆ. ಎಲ್ಲಾ ಇಲಾಖೆಗಳಲ್ಲಿ ಗುತ್ತಿಗೆ ನೌಕರರನ್ನು ಸಕ್ರಮಗೊಳಿಸುವಾಗ ವಿವಿಧ ಸೇವಾ ಷರತ್ತು ಮತ್ತು ನಿಬಂಧನೆಗಳು ಏಕರೂಪವಾಗಿರಬೇಕೆಂಬುದು ಆರ್ಥಿಕ ಇಲಾಖೆಯ ನೀತಿ ನಿರ್ಣಯವಾಗಿದೆ ಎಂದು ತಿಳಿಸಿ, ಆಡಳಿತ ಇಲಾಖೆಯು 1996 ಮತ್ತು 2002ರ ವಿಶೇಷ ನಿಯಮಾವಳಿಗಳಿಗೆ ತಿದ್ದುಪಡಿ ತರುವಂತೆ ಆರ್ಥಿಕ ಇಲಾಖೆಯು ಸೂಚಿಸಿತ್ತು.

ಆರ್ಥಿಕ ಇಲಾಖೆಯ ಸೂಚನೆ ಮೇರೆಗೆ ಪ್ರಕರಣವನ್ನು ಸಚಿವ ಸಂಪುಟದ ಮುಂದೆ ತಂದು ಮೇಲೆ ಕ್ರ.ಸಂ. (3) ಮತ್ತು (4)ರಲ್ಲಿನ ಓದಲಾದ ಅಧಿಸೂಚನೆಗಳನ್ನು ಪ್ರಕಟಿಸಲಾಯಿತು. ಕ್ರ.ಸಂ. (3)ರ ಅಧಿಸೂಚನೆಯಲ್ಲಿ ಪ್ರಕಟಿಸಲಾದ "Karnataka Civil Services (Absorption of persons appointed on Contract basis in the category of the posts of Craft instructors / Junior Instructors (Re-designated as Junior Training Officers) in the department of Employment and Training (Training Wing) into

state civil services (Special) (Amendment) Rules 2012î ರ ನಿಯಮ 4ನ್ನು ದಿನಾಂಕ: 15/02/1996ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲಾಗಿದ್ದು, ಈ ಹಿಂದೆ ಇದ್ದ ನಿಯಮ 4ಕ್ಕೆ ಬದಲಾಗಿ ಈ ಕೆಳಕಂಡಂತೆ ಸೇರ್ಪಡೆ ಮಾಡಲಾಗಿದೆ.

***4. Pay, Pension, Leave and Seniority of person absorbed under these rules.-***
*(1) The initial basic pay of the Contract Junior Training Officer shall be fixed at the minimum of the pay scale applicable to the category of post to which is absorbed under Rule 3.*

*2) The services rendered by a person as Junior Training Officer / Craft Instructor/ Junior Instructor prior to the date of absorption shall not count for the purpose of Leave, Pension pay, Seniority and grant of selection time Scale of pay under the Karnataka Civil Service (T.B.A) Rules 1983 and Karnataka Civil Services (Automatic grant of Special promotion to Senior Scale of pay) Rules 1991.*

ಹಾಗೆಯೇ ಮೇಲೆ ಕ್ರ.ಸಂ. (4)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಪ್ರಕಟಿಸಲಾದ "Karnataka Civil Services (Absorption of persons appointed on Contract basis in the category of the posts of Craft instructors / Junior Instructors (Re-designated as Junior Training Officers) in the department of Employment and Training (Training Wing) (Special) (Amendment) Rules 2012î ರಲ್ಲಿ ನಿಯಮ 4ನ್ನು ದಿನಾಂಕ: 19/07/2004ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲಾಗಿದ್ದು, ಈ ಹಿಂದೆ ಇದ್ದ ನಿಯಮ 4ಕ್ಕೆ ಬದಲಾಗಿ ಈ ಕೆಳಕಂಡಂತೆ ಸೇರ್ಪಡೆ ಮಾಡಲಾಗಿದೆ.

***4. Pay, Pension, Leave and Seniority of person absorbed under these rules.-***
*Not withstanding anything contained in the Karnataka Civil Services Rules*

*(1) The initial basic pay of the Contract Junior Training Officer shall be fixed at the minimum of the pay scale applicable to the category of post to which is absorbed under Rule 3.*

*(2) The services rendered by a person as Junior Training Officer / Craft Instructor/ Junior Instructor prior to the date of absorption shall not count for the purpose of Leave, Pension pay, Seniority and grant of selection time Scale of pay under the Karnataka Civil Service (T.B.A) Rules 1983 and Karnataka Civil Services (Automatic grant of Special promotion to Senior Scale of pay) Rules 1991.*

1996 ಹಾಗೂ 2002ರ ವಿಶೇಷ ನಿಯಮಾವಳಿಗಳಿಗೆ ತಿದ್ದುಪಡಿಯನ್ನು ನಿಯಮಾನುಸಾರ ಮಾಡಲಾಗಿದೆ. ತಿದ್ದುಪಡಿಗೂ ಮುನ್ನ ಬಾದಿತರಿಂದ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಕರಡು ತಿದ್ದುಪಡಿ ನಿಯಮಾವಳಿಗಳನ್ನು ದಿನಾಂಕ: 5/4/2012ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು. ಸದರಿ ಕರಡು ತಿದ್ದುಪಡಿಗಳಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ಅರ್ಹತೆ ಆಧಾರದಲ್ಲಿ ಪರಿಗಣಿಸಿ ಅಂತಿಮವಾಗಿ ದಿನಾಂಕ: 20/12/2012ರ ಎರಡು ಪ್ರತ್ಯೇಕ ಅಧಿಸೂಚನೆಗಳಲ್ಲಿ 1996

ಹಾಗೂ 2002ರ ವಿಶೇಷ ನಿಯಮಾವಳಿಗಳಿಗೆ ಪೂರ್ವಾನ್ವಯವಾಗಿ ತಿದ್ದುಪಡಿ ತಂದು ಗುತ್ತಿಗೆ ಆಧಾರದ ಸೇವೆಯನ್ನು ರಜೆ, ಪಿಂಚಣಿ, ವೇತನ, ಜೇಷ್ಠತೆ ಹಾಗೂ ಕಾಲಬದ್ಧ ಮುಂಬಡ್ತಿ / ಹಿರಿಯ ವೇತನ ಶ್ರೇಣಿ ಮಂಜೂರಾತಿಗೆ ಪರಿಗಣಿಸದಂತೆ ನಿರ್ಬಂಧಿಸಲಾಗಿರುತ್ತದೆ.

2012ರ ತಿದ್ದುಪಡಿ ನಿಯಮಗಳನ್ನು ಪ್ರಕಟಿಸಿದ ನಂತರ, ಉದ್ಯೋಗ ಮತ್ತು ತರಬೇತಿ ಇಲಾಖೆಯ ಕಿರಿಯ ತರಬೇತಿ ಅಧಿಕಾರಿಗಳಾದ ಶ್ರೀ ಟಿ.ಎಸ್. ಪ್ರಕಾಶ್ ಮತ್ತು ಇತರರು, ಗುತ್ತಿಗೆ ಆಧಾರದಲ್ಲಿ ನಿರ್ವಹಿಸಿದ ಸೇವೆಯನ್ನು Selection time scale of pay and re-fix the salary ಉದ್ದೇಶಗಳಿಗೆ ಪರಿಗಣಿಸಲು ಸಂಬಂಧಿಸಿದ ಪ್ರಾಧಿಕಾರಗಳಿಗೆ ನಿರ್ದೇಶನ ನೀಡುವಂತೆ ಕೋರಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ: 878-948/2013 ಮತ್ತು 949-1008/2013ನ್ನು ದಾಖಲಿಸಿದ್ದರು. ಶಿಕ್ಷಣ ಇಲಾಖೆಯಲ್ಲಿ ಅದೇ ರೀತಿಯ ತಿದ್ದುಪಡಿಯ ಹಿನ್ನೆಲೆಯಲ್ಲಿ, ಗುತ್ತಿಗೆ ಆಧಾರದ ಸೇವೆಯನ್ನು ವೇತನ ಸಂರಕ್ಷಣೆ & ಪಿಂಚಣಿ ಉದ್ದೇಶಕ್ಕೆ ಪರಿಗಣಿಸಲು ನಿರ್ದೇಶನ ನೀಡುವಂತೆ ದಾಖಲಾಗಿದ್ದ ಅರ್ಜಿ ಸಂಖ್ಯೆ:2850/2013 ಯನ್ನು ಸಹ ಜೊತೆಗೆ ಪರಿಗಣಿಸಿ ಮೇಲೆ ಕ್ರ.ಸಂ. (5)ರಲ್ಲಿ ಓದಲಾದ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ: 26/02/2018ರ ಆದೇಶದಲ್ಲಿ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

*1) The applicants are allowed.*

*2) A mandamus is issued to the 1st and 2nd respondent i.e.,the Principal Secretary to Labour Department and the Commissioner, Department of Employment and Training, Kaushalya Bhavan to consider the cases of the applicants in A.No. 878 to 948/2013 and 949 to 1008/2013 and in A.No. 2850/2013 a mandamus is issued to the 1st and 2nd respondents, i.e., the Secretary to Education Department and the Commissioner for Public Instructions to consider the case of the applicant, in accordance with law, keeping in mind the judgment rendered by the Hon'ble High Court in the case of CHIKKALINGAIAH & ORS-VS / STATE OF KARNATAKA &ORS. (Writ Petition Nos. 21523 to 21575/2016 and connected cases) reported in 2017 (3) Kar LJ 490and the Full Bench decision in the case of C.R. CHANDRASHEKARAIAH & ORS-VS-STATE OF KARNATAKA &ORS, (Writ Petition No. 30315/2002 (S-KAT)} within a period of six months from the date of the receipt of a copy of this order (Flag A).*

ಮೇಲಿನ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ತೀರ್ಪಿನ ಬಗ್ಗೆ ಕಾನೂನು ಇಲಾಖೆಯು ಅಭಿಪ್ರಾಯ ನೀಡಿದ್ದು, ಸದರಿ ಅಭಿಪ್ರಾಯದ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ.

***..Therefore I do not find any good ground to challenge the said order in appeal. Thus I concur with the opinion of the learned HLC and Ex-Officio Deputy Secretary to Government Finance and Labour Department that this is not a fit case for appeal.***

ಮೇಲೆ ಕ್ರ.ಸಂ. (6)ರಲ್ಲಿ ಓದಲಾದ ಪತ್ರದಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶವು ಮೇಲ್ಮನವಿಗೆ ಅರ್ಹ ಪ್ರಕರಣವಲ್ಲವೆಂದು ಕಾನೂನು ಇಲಾಖೆಯು ಅಭಿಪ್ರಾಯಿಸಿದ್ದ ಹಿನ್ನೆಲೆಯಲ್ಲಿ ಮಾನ್ಯ ನ್ಯಾಯಾಲಯದ ತೀರ್ಪಿನಂತೆ ಶ್ರೀ ಪ್ರಕಾಶ್ ಟಿ.ಎಸ್. ಮತ್ತು ಇತರರಿಗೆ ಕಾಲಬದ್ಧ ಮುಂಬಡ್ತಿ ನೀಡುವಂತೆ ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಇವರಿಗೆ ಅನುಮತಿ ನೀಡಲಾಗಿದೆ.

ಮೇಲೆ ಕ್ರ.ಸಂ. (7)ರಲ್ಲಿ ಓದಲಾದ ಸುತ್ತೋಲೆಯಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ: 878-948/2013 c/w 949-1008/2013ರಲ್ಲಿ ಆದೇಶಿಸಿರುವಂತೆ ಕರಾರು ಆಧಾರದಿಂದ ಇಲಾಖೆಯಲ್ಲಿ ಸಕ್ರಮಗೊಂಡ ಕಿರಿಯ ತರಬೇತಿ ಅಧಿಕಾರಿಗಳು ಕರಾರು ಆಧಾರದಲ್ಲಿ ನಿರ್ವಹಿಸುತ್ತಿದ್ದ ಅವಧಿಯ ಸೇವೆಯನ್ನು ಪರಿಗಣಿಸಿ ಕಾಲಬದ್ಧ ಮುಂಬಡ್ತಿಯನ್ನು ಮಂಜೂರು ಮಾಡುವ ಕುರಿತು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಂಬಂಧಿಸಿದ ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಇವರುಗಳಿಗೆ ಸೂಚನೆ ನೀಡಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (8)ರ ಆದೇಶದಲ್ಲಿ ಕೆಲವು ನೌಕರರುಗಳಿಗೆ ಹತ್ತು ವರ್ಷಗಳ ಕಾಲಬದ್ಧ ಮುಂಬಡ್ತಿ, 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ, 20, 25 ಮತ್ತು 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿಗಳನ್ನು ಆಯುಕ್ತರು ಮಂಜೂರು ಮಾಡಿ ಆದೇಶಿಸಿರುತ್ತಾರೆ. ಹಾಗೆಯೇ ಮೇಲೆ ಕ್ರ.ಸಂ. (10)ರಲ್ಲಿ ಓದಲಾದ ಆದೇಶದಲ್ಲಿ, 10 ವರ್ಷಗಳ ಕಾಲ ಒಂದೇ ಹುದ್ದೆಯಲ್ಲಿ ಮುಂಬಡ್ತಿ ಇಲ್ಲದೆ ಕಾರ್ಯನಿರ್ವಹಿಸಿದ ಕರಾರು ಕಿರಿಯ ತರಬೇತಿ ಅಧಿಕಾರಿಗಳಿಗೆ ಕಾಲಬದ್ಧ ಮುಂಬಡ್ತಿಯನ್ನು ಆಯುಕ್ತರು ಮಂಜೂರು ಮಾಡಿರುತ್ತಾರೆ.

ಮೇಲೆ ಕ್ರ.ಸಂ. (9)ರಲ್ಲಿ ಓದಲಾದ ಉಪ ಮಹಾಲೇಖಪಾಲರ ಪತ್ರದಲ್ಲಿ ಗುತ್ತಿಗೆ ನೇಮಕಾತಿಯ ನಂತರ ಸಕ್ರಮಾತಿಗೊಂಡ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ನೌಕರರ ಕಾಲಬದ್ಧ ಮುಂಬಡ್ತಿಯನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 878-948/2013 ಮತ್ತು 949-1008/2013ರಲ್ಲಿನ ದಿನಾಂಕ: 26/02/2018ರ ಆದೇಶದನ್ವಯ ವಿಸ್ತರಿಸುವಂತೆ ಕೋರಲಾಗುತ್ತಿದೆ. ಸದರಿ ನೌಕರರನ್ನು ಸರ್ಕಾರದ ಅಧಿಸೂಚನೆ ದಿನಾಂಕ: 19/02/1991 (ದಿನಾಂಕವನ್ನು ತಪ್ಪಾಗಿ ನಮೂದಿಸಿದ್ದು, ಸರಿಯಾದ ದಿನಾಂಕ: 15/02/1996 ಮತ್ತು 19/07/2004) ರಲ್ಲಿ ಗುತ್ತಿಗೆ ಆಧಾರದಿಂದ ವಿಲೀನಗೊಳಿಸಿದ್ದು, ಸದರಿ ಅಧಿಸೂಚನೆಯನ್ವಯ ವಿಲೀನಕ್ಕೂ ಮೊದಲು ಗುತ್ತಿಗೆ ಆಧಾರದಲ್ಲಿ ಸಲ್ಲಿಸಿದ ಸೇವೆಯು ವೇತನ, ರಜೆ ಮತ್ತು ಪಿಂಚಣಿ ಉದ್ದೇಶಕ್ಕೆ ಮಾತ್ರ ಪರಿಗಣಿಸಲ್ಪಡುತ್ತದೆ. ಆದರೆ, ಜೇಷ್ಠತೆ ಮತ್ತು ಸ್ವಯಂಚಾಲಿತ ಆಯ್ಕೆ ಶ್ರೇಣಿ ವೇತನ ಮಂಜೂರಾತಿಗೆ ಕೆ.ಸಿ.ಎಸ್. (ಟಿ.ಬಿ.ಎ) ನಿಯಮಾವಳಿಗಳು 1983ರನ್ವಯ ಪರಿಗಣಿಸಲು ಅವಕಾಶವಿರುವುದಿಲ್ಲ. ಹಾಗಾಗಿ ವಿಲೀನಗೊಂಡ ದಿನಾಂಕದಿಂದ ಹತ್ತು ವರ್ಷಗಳ ಅವಧಿಯನ್ನು ಪೂರೈಸಿದವರೆಗೆ ಕಾಲಬದ್ಧ ಮುಂಬಡ್ತಿಯನ್ನು ಮಂಜೂರು ಮಾಡಲು ಅವಕಾಶವಿದ್ದು, ಇದನ್ನು ಉಲ್ಲೇಖಿಸಿ ಕೆ.ಸಿ.ಎಸ್. (ಟಿ.ಬಿ.ಎ) ನಿಯಮಾವಳಿಗಳು 1983ರ ನಿಯಮದ ಪ್ರತಿಯನ್ನು ಒದಗಿಸಿರುತ್ತಾರೆ. ಮುಂದುವರೆದು, ಉಪ ಮಹಾಲೇಖಪಾಲರು ತಮ್ಮ ಪತ್ರದಲ್ಲಿ ಕಚೇರಿಯ ಮುಖ್ಯಸ್ಥರುಗಳು ಕಾಲಬದ್ಧ ಮುಂಬಡ್ತಿಯನ್ನು ಜಾರಿಗೊಳಿಸಿ ವೇತನವನ್ನು ಮರುನಿಗಧಿಗೊಳಿಸಿ ಮತ್ತು ಪಿಂಚಣಿಯನ್ನು ಪರಿಷ್ಕರಿಸಲು ಪ್ರಸ್ತಾವನೆಗಳನ್ನು ರವಾನಿಸಿರುವುದಾಗಿ ತಿಳಿಸಿ,

ಅಂತಹ ಪ್ರಕರಣಗಳಲ್ಲಿ ಶ್ರೀ ಹೆಚ್.ಎಸ್.ಕೆ.ಗೌಡ, ನಿವೃತ್ತ ಕಿರಿಯ ತರಬೇತಿ ಅಧಿಕಾರಿ (ದಿನಾಂಕ: 31/08/2019 ರಂದು ನಿವೃತ್ತಿ), ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ತುಮಕೂರು ರಸ್ತೆ, ಬೆಂಗಳೂರು ಇವರ ಪ್ರಕರಣವು ಸಹ ಒಂದಾಗಿದ್ದು, ಸದರಿಯವರ ಸೇವಾ ಪುಸ್ತಕವನ್ನು ಸಹ ಉದಾಹರಣೆಯಾಗಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಮುಂದುವರೆದು, ಉಪ ಮಹಾಲೇಖಪಾಲರು ತಮ್ಮ ಪತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಇಡಿ 409 ಡಿಜಿಡಿ 2013 ದಿನಾಂಕ: 08/06/2016ಅನ್ನು ಉಲ್ಲೇಖಿಸುವುದರ ಜೊತೆಗೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶವು ಸರ್ಕಾರದ ಅಧಿಸೂಚನೆಯಲ್ಲಿನ ಆದೇಶಗಳಿಗೆ ವ್ಯತಿರಿಕ್ತವಾಗಿದ್ದು, ಪ್ರಕರಣವನ್ನು ಪುನರ್ ಪರಿಶೀಲಿಸಿ ಸರ್ಕಾರದ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಸೂಕ್ತ ಸೂಚನೆಗಳನ್ನು ಹೊರಡಿಸುವಂತೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (11)ರ ಪತ್ರದಲ್ಲಿ ಕರಾರು ಆಧಾರದಲ್ಲಿ ಕಿರಿಯ ತರಬೇತಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿ ವಿಶೇಷ ನಿಯಮಾವಳಿಗಳ ಮೂಲಕ ವಿಲೀನಾತಿಗೊಂಡ ಕಿರಿಯ ತರಬೇತಿ ಅಧಿಕಾರಿಗಳಿಗೆ ಹತ್ತು ವರ್ಷಗಳ ಕಾಲಬದ್ಧ ಮುಂಬಡ್ತಿ, 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ, 20, 25 ಮತ್ತು 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, 111 ಕಿರಿಯ ತರಬೇತಿ ಅಧಿಕಾರಿಗಳಿಗೆ 10 ವರ್ಷಗಳ ಕಾಲಬದ್ಧ ಮುಂಬಡ್ತಿ, 15 ವರ್ಷಗಳ ಸ್ವಯಂಚಾಲಿತ ಮುಂಬಡ್ತಿ, 20, 25 ಮತ್ತು 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಬೇಕಾದಲ್ಲಿ ರೂ. 365.00 ಲಕ್ಷಗಳ ಅನುದಾನದ ಅವಶ್ಯಕತೆ ಇರುವುದಾಗಿ ಹಾಗೂ ವಿಶೇಷ ನಿಯಮಾವಳಿಯ ನಿಯಮ 4ರಲ್ಲಿ Selection Time Scale ಮಂಜೂರಾತಿಗೆ ಸಂಬಂಧಿಸಿದಂತೆ ನಿಯಮ ಪರಿಷ್ಕರಣೆ ಮಾಡಿಕೊಡಬೇಕೆಂದು ಮತ್ತು ಸರ್ಕಾರದ ಮೇಲೆ ಓದಲಾದ ಕ್ರ.ಸಂ. (6)ರ ಪತ್ರದಲ್ಲಿ ಕಾಲಬದ್ಧ ಮುಂಬಡ್ತಿ ಮಾತ್ರ ನೀಡಲು ಅನುಮತಿ ನೀಡಿದ್ದು, 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ, 20, 25 ಮತ್ತು 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಆಯುಕ್ತರು ಕೋರಿರುತ್ತಾರೆ.

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಇಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ನಂತರದಲ್ಲಿ ಇಲಾಖೆಯ ಸೇವೆಯಲ್ಲಿ ವಿಶೇಷ ನಿಯಮಾವಳಿಗಳ ಮೂಲಕ ವಿಲೀನಾತಿ ಹೊಂದಿದ ನೌಕರರಿಗೆ ಗುತ್ತಿಗೆ ಆಧಾರದ ಸೇವೆಯಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ *Karnataka Civil Services (T.B.A) Rules 1983 and Karnataka Civil Service (Automatic grant of Special promotion to Senior Scale of pay) Rules 1991* ರಡಿ ಕಾಲಬದ್ದ ಮತ್ತು ಹಿರಿಯ ಶ್ರೇಣಿ ಮುಂಬಡ್ತಿಗಳನ್ನು ನೀಡುವ ಕುರಿತು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:878-948/2013 ಮತ್ತು 949-1008/2013 ಇವುಗಳಲ್ಲಿ ದಿನಾಂಕ:26.02.2018ರಂದು ನೀಡಿರುವ ತೀರ್ಪು, ಮಹಾಲೇಖಪಾಲರು ಎತ್ತಿರುವ ಆಕ್ಷೇಪಣೆ ಹಾಗೂ ಆಯುಕ್ತರು ಮಾರ್ಗದರ್ಶನ ಕೋರಿರುವ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಲಾಗಿ ಆರ್ಥಿಕ ಇಲಾಖೆಯು ಈ ಕೆಳಕಂಡಂತೆ ಹಿಂಬರಹ ನೀಡಿರುತ್ತದೆ.

"…….. ರಿಟ್ ಅರ್ಜಿ ಸಂ:21523-21575/2016 ಮತ್ತು ಸಂಬಂಧಿತ ಅರ್ಜಿಗಳ ಮೇಲೆ ನೀಡಿದ ತೀರ್ಪಿನಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಅಲಯವು, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿಗಳಲ್ಲಿನ ಆದೇಶಗಳನ್ನು ವಜಾ ಮಾಡಿರುತ್ತದೆ. ಮತ್ತು ಗುತ್ತಿಗೆ ಆಧಾರದ ಮೇಲೆ ಸೇವಾ ಸಕ್ರಮಾತಿಗೊಂಡ ಕಿರಿಯ ತರಬೇತಿ ಅಧಿಕಾರಿಗಳ ಸೇವಾ ನಿಯಮಗಳಿಗೆ ತಿದ್ದುಪಡಿ ಮಾಡಿದ ವಿಶೇಷ ನಿಯಮ; "Karnataka Civil Services (Absorption of persons appointed on Contract basis in the category of the posts of Craft instructors / Junior Instructors (Re-designated as Junior Training Officers) in the department of Employment and Training (Training Wing) (Special) (Amendment) Rules 2012î ರ ನಿಯಮಗಳ ಪೈಕಿ ಆಯ್ಕೆಕಾಲಿಕ ವೇತನ ಶ್ರೇಣಿ ಮಂಜೂರು ಮಾಡುವ ಕುರಿತಂತೆ ಇರುವ ಅವಕಾಶಗಳನ್ನು ಅಷ್ಟರ ಮಟ್ಟಿಗೆ readdown ಮಾಡಿ ಅನುಷ್ಠಾನ ಯೋಗ್ಯವಲ್ಲವೆಂದು ಅಭಿಪ್ರಾಯ ಪಟ್ಟಿರುತ್ತದೆ. ಮಾನ್ಯ ನ್ಯಾಯಾಲಯವು ಸೇವಾ ಸಕ್ರಮಾತಿಗೊಂಡ ನೌಕರರಿಗೆ ಅವರು ಸಕ್ರಮಾತಿಗೊಂಡ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ನಿಯಮಗಳ ಪ್ರಕಾರ ಸೇವಾ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ ಎಂದು ಘೋಷಿಸಿರುತ್ತದೆ. ಅಂದ ಮೇಲೆ 2002ರ ವಿಶೇಷ ನೇಮಕಾತಿ ನಿಯಮಗಳ ಸಿಂಧುತ್ವವನ್ನು ಈ ಪ್ರಕರಣದಲ್ಲಿ ಎತ್ತಿಹಿಡಿದಂತಾಗಿರುತ್ತದೆ. ಆದುದರಿಂದ,

ಸದರಿ ನೌಕರರುಗಳಿಗೆ ಕಾಲಬದ್ಧ ಮುಂಬಡ್ತಿ ಮತ್ತು ಹಿರಿಯ ವೇತನ ಶ್ರೇಣಿ ಮುಂಬಡ್ತಿ ಸೌಲಭ್ಯಗಳನ್ನು ***the Karnataka Civil Services (Absorption of persons appointed on contract basis in the category of posts of Craft Instructors/ Junior Instructors (Re-designated as Junior Training Officers) in the department of Employment and Training (Training Wing) (Special) Rules, 2002***ರ ನಿಯಮಗಳಲ್ಲಿನ ಅವಕಾಶಗಳನ್ವಯ ಪರಿಗಣಿಸಿ ಮಂಜೂರು ಮಾಡತಕ್ಕದ್ದಾಗಿರುತ್ತದೆ. ಆಯ್ಕೆಕಾಲಿಕ ವೇತನಶ್ರೇಣಿ ಮಂಜೂರು ಮಾಡುವ ಕುರಿತಂತೆ ಚಾಲ್ತಿಯಲ್ಲಿರುವ ಸದರಿ ನಿಯಮಗಳ ನಿಯಮ 4(ii)ರ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ:

> **"4(ii) The services rendered as a Craft Instructor/ Junior Instructor (now re-designated as Junior Training Officer) shall count for the purpose of leave, increment and pension only and service rendered on Contract Basis shall not count for purposes of Seniority and grant of Selection Scale of Pay under the Karnataka Civil Services (T.B.A.) Rules, 1983 and Karnataka Civil Services (Automatic grant of Special Promotion to Senior Scale of Pay) Rules, 1991".**

ಮುಂದುವರೆದು, ಅರ್ಜಿ ಸಂ: 878-948/2013ರ ತೀರ್ಪಿನಲ್ಲಿ ಮಾನ್ಯ ಆಡಳಿತ ನ್ಯಾಯ ಮಂಡಳಿಯು ಸೂಚಿಸಿರುವ ಮತ್ತೊಂದು ಉಚ್ಚ ನ್ಯಾಯಾಲಯದ ಪ್ರಕರಣ ರಿಟ್ ಅರ್ಜಿ ಸಂ: 30315/2002ರ ತೀರ್ಪಿನ ಬೆಳಕಿನಲ್ಲಿ ಪರಿಶೀಲಿಸಿದಾಗ ಸದರಿ ರಿಟ್ ಅರ್ಜಿಯಲ್ಲಿನ ವಿಷಯವು ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಸೇವೆ ಸಲ್ಲಿಸಿದ್ದ ಕಿರಿಯ ಇಂಜಿನಿಯರ್‌ಗಳ

ಸೇವೆಯನ್ನು ಕಾಲಬದ್ಧ ಮುಂಬಡ್ತಿಗೆ ಇಲಾಖೆಯದ್ದೇ ಆದ ಬೇರೆ ವಿಶೇಷ ನಿಯಮಗಳಡಿ ಪರಿಗಣಿಸಿ ಮಂಜೂರು ಮಾಡುವ ಕುರಿತಾಗಿರುತ್ತದೆ. ಆದರೆ, ಈ ಪ್ರಕರಣವನ್ನು ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ ಸೇವಾ ಸಕ್ರಮಾತಿಗೊಂಡ ನೌಕರರಿಗೆ ಅನ್ವಯಿಸಿ ಅನುಷ್ಠಾನಗೊಳಿಸಲು ಬರುವುದಿಲ್ಲ. ಏಕೆಂದರೆ, ಇಂತಹುದೇ ಬೇರೊಂದು ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 525-641/1999 ಮತ್ತು ಸಂಬಂಧಿಸಿದ ಇತರೆ ಪ್ರಕರಣಗಳಲ್ಲಿ ನೀಡಿದ ತೀರ್ಪಿನಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತೀರ್ಪನ್ನು ವಜಾಗೊಳಿಸಿದ್ದು, Local candidate ಮತ್ತು Contract Employee ಇವೆರಡೂ ಭಿನ್ನ ವರ್ಗಗಳಾಗಿರುತ್ತವೆ ಎಂದು ಅಭಿಪ್ರಾಯಪಟ್ಟಿರುತ್ತದೆ. ಆದುದರಿಂದ, ರಿಟ್ ಅರ್ಜಿ ಸಂ: 30315/2002ರ ತೀರ್ಪು ಈ ಪ್ರಕರಣಕ್ಕೆ ಅನ್ವಯಿಸಲು ಬರುವುದಿಲ್ಲ.

ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು R.P.Bhatt V/s Union of India (AIR 1986 SC 1040) ರಲ್ಲಿ ನೀಡಿದ ತೀರ್ಪಿನಲ್ಲಿ ವಿಧಿಸಿದ ಶಾಸನದಂತೆ ನಿಯಮಾನುಸಾರ ಪರಿಶೀಲಿಸಲಾಯಿತು.

ಪ್ರಸ್ತುತ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನಂತೆ ಅನ್ವಯಿಸಬೇಕಾಗಿರುವ, 2002ರ ವಿಶೇಷ ನೇಮಕಾತಿ ನಿಯಮಗಳ ನಿಯಮ 4(2)ರ ಅವಕಾಶಗಳನ್ವಯ ಪ್ರಕರಣವನ್ನು ಪರಿಶೀಲಿಸಿದಾಗ ಸದರಿ ನಿಯಮಗಳಲ್ಲಿ ವಿಧಿಸಿರುವ ನಿರ್ಬಂಧನೆಯಂತೆ ಗುತ್ತಿಗೆ ಆಧಾರದ ಮೇಲೆ ಸೇವಾ ಸಕ್ರಮಾತಿಗೊಂಡ ಕಿರಿಯ ತರಬೇತಿ ಅಧಿಕಾರಿಗಳು

ಸೇವಾ ಸಕ್ರಮಾತಿ ದಿನಾಂಕಕ್ಕೂ ಪೂರ್ವದಲ್ಲಿ ಸಲ್ಲಿಸಿದ ಗುತ್ತಿಗೆ ಸೇವಾ ಅವಧಿಯನ್ನು ಕಾಲಬದ್ಧ ಮುಂಬಡ್ತಿ ಮತ್ತು ಹಿರಿಯ ವೇತನಶ್ರೇಣಿ ಮುಂಬಡ್ತಿ ಸೌಲಭ್ಯಗಳ ಮಂಜೂರಾತಿಗಾಗಿ; ಕ.ನಾ.ಸೇ. (ಕಾಲಬದ್ಧ ಮುಂಬಡ್ತಿ) ನಿಯಮಗಳು, 1983 ಮತ್ತು ಕ.ನಾ.ಸೇ.(ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ಮುಂಬಡ್ತಿ) ನಿಯಮಗಳು, 1991ರ ಅವಕಾಶಗಳನ್ವಯ ಪರಿಗಣಿಸಲು ಅವಕಾಶವಿರುವುದಿಲ್ಲ.

ಆದುದರಿಂದ, 2002ರ ವಿಶೇಷ ನೇಮಕಾತಿ ನಿಯಮಗಳನ್ವಯ ಮತ್ತು 1996ರ ವಿಶೇಷ ನೇಮಕಾತಿ ನಿಯಮಗಳನ್ವಯ ಸೇವಾ ಸಕ್ರಮಾತಿಗೊಂಡ ನೌಕರರಿಗೆ ಸದರಿ ನಿಯಮಗಳ ನಿಯಮ 4(2)ರಲ್ಲಿನ ಅವಕಾಶಗಳನ್ವಯ ಅವರ ಖಾಯಂ ಪೂರ್ವ ಗುತ್ತಿಗೆ ಸೇವಾವಧಿಯನ್ನು ಕಾಲಬದ್ಧ ಮುಂಬಡ್ತಿ ಮತ್ತು ಹಿರಿಯ ವೇತನ ಶ್ರೇಣಿ ಮುಂಬಡ್ತಿ ಸೌಲಭ್ಯಗಳಿಗೆ ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಿದೆ.

The Department is also requested to revisit the cases wherein decision was taken to grant the benefit of TBA and senior scale of pay to some of the regular employees by reckoning the period of contract service which is against the very spirit of the rules governing the grant of STS and against the policy of the State Government".

ಮೇಲೆ ಕ್ರ.ಸಂ. (12)ರಲ್ಲಿ ಓದಲಾದ ಶಿಕ್ಷಣ ಇಲಾಖೆಯ ಸುತ್ತೋಲೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 525-641/1999 C/w SLP (C) No. 6456-6606/2000, CA No. 3491/2000 & CA No. 3747-3748/2000 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸರ್ಕಾರದ ಸದರಿ ಅರ್ಜಿಯನ್ನು ಪುರಸ್ಕರಿಸಿ, ಶ್ರೀ ಹಾಲಪ್ಪ ಪ್ರಕರಣದಲ್ಲಿ ನೀಡಲಾದ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳನ್ನು ವಜಾಗೊಳಿಸಿ, ಆದೇಶಿಸಿರುತ್ತದೆ. ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿದೆ-

> *The expression “Local candidate and rule 41A of the Karnataka Civil Services rules and Note 7 to Rule 41 was however interpreted in a very strained manner by the tribunal to uphold the contention raised on behalf of the petitioners.*
>
> *Such a situation in the present case will not arise at all. Because it is not the continuation of original appointment made which is one contract basis and contract come to an end either on the expiry of the term or on a regular candidate reporting to duty particularly in the contract itself makes it clear that the service shall not be counted for any purpose, the claim of the respondents could not have been brought under rule 41A at all.*

“Local candidates” ಮತ್ತು “Contract Employees” ಇವೆರಡೂ ವಿಭಿನ್ನ ವರ್ಗಗಳಾಗಿದ್ದು, ಈ ಎರಡೂ ವರ್ಗಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 41(ಎ) ರ ಸೌಲಭ್ಯವನ್ನು “Contract Employees” ವಿಸ್ತರಿಸುವುದಕ್ಕೋಸ್ಕರ ಸಂಬಂಧಿಸಿದಂತೆ ಹೋಲಿಕೆ ಕಲ್ಪಿಸುವುದು ತಪ್ಪು ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನ ವಿಶ್ಲೇಷಣೆಯಲ್ಲಿ ಸ್ಪಷ್ಟವಾಗಿ ವಿಷದೀಕರಿಸಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸದರಿ ತೀರ್ಪಿನಲ್ಲಿನ ಆದೇಶವನ್ನು ಉಲ್ಲೇಖಿಸಿ ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ಸಲ್ಲಿಸಿದ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ 41(ಎ) ರಡಿಯಲ್ಲಿ ಸೌಲಭ್ಯಕ್ಕಾಗಿ ಪರಿಗಣಿಸತಕ್ಕದ್ದಲ್ಲವೆಂದು ಈಗಾಗಲೇ ಸಂಬಂಧಿಸಿದ ಎಲ್ಲರಿಗೂ ಕಟ್ಟುನಿಟ್ಟಿನ ಸೂಚನೆಯನ್ನು ನೀಡಿರುತ್ತದೆ.

ಮೇಲೆ ಕ್ರ.ಸಂ. (13)ರಲ್ಲಿ ಓದಲಾದ ಶಿಕ್ಷಣ ಇಲಾಖೆಯ ಸುತ್ತೋಲೆಯಲ್ಲಿ ಸಾರ್ವಜನಿಕ ಹಣವನ್ನು ಅರ್ಹತೆ ಮೀರಿ ವೇತನ / ಪಿಂಚಣಿಯನ್ನು ಪಾವತಿಸಲು ಉಪಯೋಗಿಸಿಕೊಳ್ಳತಕ್ಕದ್ದಲ್ಲವೆಂಬ ನಿರ್ದೇಶನವನ್ನು ಪರಿಗಣಿಸಿ, ಜಾರಿಯಲ್ಲಿರುವ ನಿಯಮಗಳನ್ನು ತಪ್ಪಾಗಿ ಅನ್ವಯಿಸಿ ನಿಗದಿಪಡಿಸಿದ ವೇತನ / ಪಿಂಚಣಿಯನ್ನು ಭವಿಷ್ಯದಲ್ಲಿ ಮುಂದುವರೆಸತಕ್ಕದ್ದಲ್ಲ, ವಿಶೇಷವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಿದ್ದುಪಡಿ ನಿಯಮಗಳನ್ನು ಎತ್ತಿಹಿಡಿದಿರುವ ಹಿನ್ನೆಲೆಯಲ್ಲಿ ಕೆಲವು ನೌಕರರಿಗೆ ವೇತನ ಮತ್ತು ತದನಂತರದ ಪಿಂಚಣಿಯನ್ನು ತಪ್ಪಾಗಿ ನಿಗದಿಪಡಿಸಿರುವುದು, ಅಂತಹ ನೌಕರರಿಗೆ ಭವಿಷ್ಯದಲ್ಲಿ ಹೆಚ್ಚುವರಿ ಪಾವತಿಯನ್ನು ಮುಂದುವರೆಸುವುದು ತಾರ್ಕಿಕವಾಗತಕ್ಕದ್ದಲ್ಲವೆಂದು ಪರಿಗಣಿಸಿ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 525-641/1999 C/w SLP (C) No. 6456-

6606/2000, CA No. 3491/2000 & CA No. 3747-3748/2000 ರಲ್ಲಿ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಲವು ಮಾರ್ಗಸೂಚಿಗಳನ್ನು ನೀಡಿರುತ್ತದೆ.

1996 ಮತ್ತು 2002ರ ವಿಶೇಷ ನೇಮಕಾತಿ ನಿಯಮಾವಳಿಗಳ ನಿಯಮ 4ರಡಿಯಲ್ಲಿ, 2012ರ ತಿದ್ದುಪಡಿ ನಿಯಮಾವಳಿಗಳ ನಿಯಮ 4ರಡಿಯಲ್ಲಿ ಗುತ್ತಿಗೆ ಆಧಾರದ ಸೇವಾವಧಿಯನ್ನು ಪರಿಗಣಿಸಿ ಕಾಲಬದ್ದ ಮುಂಬಡ್ತಿ ಮತ್ತು ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ಮುಂಬಡ್ತಿಗಳನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಿರುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 525-641/1999 C/w SLP (C) No. 6456-6606/2000, CA No. 3491/2000 & CA No. 3747-3748/2000 ರಲ್ಲಿ ದಿನಾಂಕ: 26/4/2002ರಲ್ಲಿ ನೀಡಿರುವ ತೀರ್ಪಿನ ಬೆಳಕಿನಲ್ಲಿ, ಆರ್ಥಿಕ ಇಲಾಖೆಯು ದಿನಾಂಕ: 7/4/2022ರಂದು ನೀಡಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಹಾಗೂ ಶಿಕ್ಷಣ ಇಲಾಖೆಯು ಇಂತಹದ್ದೇ ಪ್ರಕರಣಗಳಲ್ಲಿ ತೆಗೆದುಕೊಂಡಿರುವ ನಿರ್ಣಯಗಳ ಹಿನ್ನೆಲೆಯಲ್ಲಿ ಪ್ರಕರಣವನ್ನು ಪುನರ್ ಪರಿಶೀಲಿಸಲಾಯಿತು. ಸೇವಾ ವಿಲೀನಾತಿಗೂ ಮುನ್ನ ಸಲ್ಲಿಸಿದ ಗುತ್ತಿಗೆ ಆಧಾರದ ಸೇವಾ ಅವಧಿಯನ್ನು ಕಾಲಬದ್ಧ ಮುಂಬಡ್ತಿ ಮತ್ತು ಹಿರಿಯ ವೇತನ ಶ್ರೇಣಿಯ ಸ್ವಯಂಚಾಲಿತ ಮುಂಬಡ್ತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

ಆದ್ದರಿಂದ, ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 53 ಕೈತಸೇ 2019, ಬೆಂಗಳೂರು, ದಿನಾಂಕ: 29/08/2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 1996 ಮತ್ತು 2002ರ ವಿಶೇಷ ನೇಮಕಾತಿ ನಿಯಮಾವಳಿಗಳಡಿ ಸರ್ಕಾರಿ ಸೇವೆಗೆ ನೇಮಕಗೊಂಡ ಕಿರಿಯ ತರಬೇತಿ ಅಧಿಕಾರಿಗಳು ಸೇವಾ ವಿಲೀನಾತಿಗೂ ಮುನ್ನ ಸಲ್ಲಿಸಿದ ಗುತ್ತಿಗೆ ಆಧಾರದ ಸೇವಾ ಅವಧಿಯನ್ನು ಕಾಲಬದ್ಧ ಮುಂಬಡ್ತಿ ಮತ್ತು ಹಿರಿಯ ವೇತನ ಶ್ರೇಣಿಯ ಸ್ವಯಂಚಾಲಿತ ಮುಂಬಡ್ತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ. ಅದರಂತೆ, ಸರ್ಕಾರದ ಪತ್ರ ಸಂಖ್ಯೆ: ಕೌಉಜೀಇ 53 ಕೈತಸೇ 2019 ದಿನಾಂಕ: 17/6/2020 ಇದನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದಿದೆ ಹಾಗೂ ಸದರಿ ಪತ್ರದ ಆಧಾರದಲ್ಲಿ ಕಾಲಬದ್ದ ಮುಂಬಡ್ತಿ ಹಾಗೂ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ, 20, 25 ಮತ್ತು 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡಿ ಹೊರಡಿಸಿರುವ ಆಯುಕ್ತಾಲಯದ ಆದೇಶಗಳನ್ನು ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ಹಿಂಪಡೆಯತಕ್ಕದ್ದು.

1. ಇನ್ನೂ ಸೇವೆಯಲ್ಲಿರುವ ಅಧಿಕಾರಿ / ನೌಕರರ ಕಾಲಬದ್ಧ ಮುಂಬಡ್ತಿ ಹಾಗೂ ಹಿರಿಯ ವೇತನ ಶ್ರೇಣಿಯ ಸ್ವಯಂಚಾಲಿತ ಮುಂಬಡ್ತಿಗಳನ್ನು ತಿದ್ದುಪಡಿ ನಿಯಮಗಳನ್ವಯ ಅಂದರೆ ಸರ್ಕಾರದ ಅಧಿಸೂಚನೆ-I ಸಂಖ್ಯೆ: ಕಾಇ 201 ಇಟಿಐ 2011 ದಿನಾಂಕ: 20/12/2012 ಮತ್ತು ಸರ್ಕಾರದ ಅಧಿಸೂಚನೆ-II ಸಂಖ್ಯೆ: ಕಾಇ 201 ಇಟಿಐ 2011 ದಿನಾಂಕ: **20/12/2012 ಗಳನ್ವಯ** ಸಂಬಂಧಿಸಿದ ವೇತನ ಮಂಜೂರಾತಿ / ಬಟವಾಡೆ ಅಧಿಕಾರಿಯು (Drawing Officer) ಪುನರ್ ನಿಗಧಿಪಡಿಸತಕ್ಕದ್ದು. ಕಾಲಬದ್ಧ ಮುಂಬಡ್ತಿ ಮತ್ತು ಹಿರಿಯ ವೇತನ ಶ್ರೇಣಿಯ ಸ್ವಯಂಚಾಲಿತ ಮುಂಬಡ್ತಿ ಸೌಲಭ್ಯಗಳನ್ನು ಮಂಜೂರು ಮಾಡಿ ವೇತನವನ್ನು ತಪ್ಪಾಗಿ ನಿಗದಿಪಡಿಸಲಾದ ಪ್ರಕರಣಗಳನ್ನು ಪುನರಾವಲೋಕಿಸಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಹಿಂಪಡೆಯತಕ್ಕದ್ದು. ಕ.ನಾ.ಸೇ. (ಕಾಲಬದ್ಧ ಮುಂಬಡ್ತಿ) ನಿಯಮಗಳು, 1983 ಮತ್ತು ಕ.ನಾ.ಸೇ.(ಹಿರಿಯ ವೇತನ

ಶ್ರೇಣಿಗೆ ಸ್ವಯಂಚಾಲಿತ ಮುಂಬಡ್ತಿ) ನಿಯಮಗಳು, 1991ರಡಿ ಮಂಜೂರು ಮಾಡಲಾಗುವ ಕಾಲಬದ್ಧ ಮತ್ತು ಸ್ವಯಂಚಾಲಿತ ವೇತನ ಮುಂಬಡ್ತಿಗಳು ದಿನಾಂಕ: 20/12/2012ರ ಸರ್ಕಾರದ ಅಧಿಸೂಚನೆಗಳನ್ವಯ ನಿಯಂತ್ರಿಸಲ್ಪಡತಕ್ಕದ್ದು.

2. ನಿವೃತ್ತರಾಗಿ ಪಿಂಚಣಿ ನಿಗದಿಗಾಗಿ ಕಾಯುತ್ತಿರುವ ಅಧಿಕಾರಿ / ನೌಕರರ ವೇತನವನ್ನು ಪಿಂಚಣಿ ಮಂಜೂರಾತಿ ಪ್ರಾಧಿಕಾರಿಗಳು ತಿದ್ದುಪಡಿ ನಿಯಮಗಳನ್ವಯ ಅಂದರೆ ಸರ್ಕಾರದ ಅಧಿಸೂಚನೆ-I ಸಂಖ್ಯೆ: ಕಾಇ 201 ಇಟಿಐ 2011 ದಿನಾಂಕ: 20/12/2012 ಮತ್ತು ಸರ್ಕಾರದ ಅಧಿಸೂಚನೆ-II ಸಂಖ್ಯೆ: ಕಾಇ 201 ಇಟಿಐ 2011 ದಿನಾಂಕ: 20/12/2012 ಗಳನ್ವಯ ಪುನರ್ ನಿಗದಿಪಡಿಸಿ ತದನಂತರ ಪಿಂಚಣಿ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಕಳುಹಿಸತಕ್ಕದ್ದು. ಮಹಾಲೇಖಪಾಲರ ಕಚೇರಿಯಲ್ಲಿ ಬಾಕಿ ಇರುವ ಇಂತಹ ಪ್ರಕರಣಗಳನ್ನು ಪಿಂಚಣಿ ಮಂಜೂರಾತಿ ಪ್ರಾಧಿಕಾರಿಗಳಿಗೆ ಹಿಂದಿರುಗಿಸತಕ್ಕದ್ದು.

3. ಸಂಬಂಧಿಸಿದ ಇಲಾಖಾ ಮುಖ್ಯಸ್ಥರು ಮತ್ತು ಪಿಂಚಣಿ ಮಂಜೂರಾತಿ ಪ್ರಾಧಿಕಾರಿಗಳು, ತಿದ್ದುಪಡಿ ನಿಯಮಗಳನ್ನು ಅನ್ವಯಿಸದೇ ಪಿಂಚಣಿ ಪಡೆಯುತ್ತಿರುವ ನಿವೃತ್ತ ನೌಕರರ ಪ್ರಕರಣಗಳನ್ನು ಗುರುತಿಸತಕ್ಕದ್ದು. ಮಹಾಲೇಖಪಾಲರ ಕಚೇರಿಯಲ್ಲಿ ಲಭ್ಯವಿರುವ ಮಾಹಿತಿಗಳನ್ನು ಇಲಾಖಾ ಮುಖ್ಯಸ್ಥರು ಮತ್ತು ಪಿಂಚಣಿ ಮಂಜೂರಾತಿ ಪ್ರಾಧಿಕಾರಿಗಳೊಂದಿಗೆ ಹಂಚಿಕೊಳ್ಳತಕ್ಕದ್ದು. ಪಿಂಚಣಿ ಮಂಜೂರಾತಿ ಪ್ರಾಧಿಕಾರಿಗಳು ತಿದ್ದುಪಡಿ ನಿಯಮಗಳನ್ವಯ ಅರ್ಹ ಅಂತಿಮ ವೇತನವನ್ನು ಪುನರ್ ನಿಗದಿಪಡಿಸತಕ್ಕದ್ದು ಮತ್ತು ಪಿಂಚಣಿಯನ್ನು ಪರಿಷ್ಕರಿಸಲು ಮಹಾಲೇಖಪಾಲರಿಗೆ ಪ್ರಸ್ತಾವನೆಯನ್ನು ಕಳುಹಿಸತಕ್ಕದ್ದು.

4. ಕುಟುಂಬ ಪಿಂಚಣಿ ಪ್ರಕರಣಗಳನ್ನು ಸಹ ಮೇಲೆ (3)ನೇ ಅಂಶದಲ್ಲಿ ನೀಡಿರುವ ನಿರ್ದೇಶನದ ರೀತಿಯಲ್ಲೇ ವ್ಯವಹರಿಸತಕ್ಕದ್ದು.

5. ಅಂಶ (1) ರಿಂದ (4)ರಲ್ಲಿನ ಕಾರ್ಯವನ್ನು ಆದೇಶದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಪೂರ್ಣಗೊಳಿಸತಕ್ಕದ್ದು.

6. ತಪ್ಪಾಗಿ ಕಾಲಬದ್ಧ ವೇತನ ಮುಂಬಡ್ತಿ / ಸ್ವಯಂಚಾಲಿತ ಮುಂಬಡ್ತಿಗಳ ಮಂಜೂರಾತಿಯ ಕಾರಣಕ್ಕಾಗಿ ಈಗಾಗಲೇ ಹೆಚ್ಚುವರಿಯಾಗಿ ಪಾವತಿಯಾಗಿರುವ ವೇತನ ಮತ್ತು / ಅಥವಾ ಪಿಂಚಣಿ / ಕುಟುಂಬ ಪಿಂಚಣಿ / ಡಿಸಿಆರ್‌ಜಿ / ಕಮ್ಯೂಟೆಡ್ ವ್ಯಾಲ್ಯು ಆಫ್ ಪೆನ್ಷನ್ ಅನ್ನು ವಸೂಲಿ ಮಾಡತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 287 ಸೇ-2/2022, ಆಇ 156 ವೆಚ್ಚ-9 2021 ದಿನಾಂಕ: 18/8/2022ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

**PR-321**